ಅನೌಪಚಾರಿಕ ಪಡಿತರ ಪ್ರದೇಶ	19,06,015
ಪಟ್ಟಣ ಪ್ರದೇಶ	8,76,730
ಗ್ರಾಮಾಂತರ ಪ್ರದೇಶ	77,56,802
ಒಟ್ಟು	1,05,39,547

ಹೌದು

ಇ) ಇಲ್ಲ

ಈ) ಮುಕ್ತ ಮಾರುಕಟ್ಟೆಯಲ್ಲಿ ಸೀಮೆಎಣ್ಣೆ ಖರೀದಿಸಲು ಯಾವುದೇ ನಿರ್ಬಂಧವಿರುವುದಿಲ್ಲ

ಉ) ಇಲ್ಲ

ಊ) ಪಡಿತರ -ಸೀಮೆಎಣ್ಣೆಯು ಕಾಳಸಂತೆಯಲ್ಲಿ ಮಾರಾಟವಾದ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಕಾಯ್ದೆ `1955 ರನ್ವಯ ಕ್ರಮ ಜರುಗಿಸಲಾಗುತ್ತದೆ

153 (239) ಶ್ರೀ ಸಿಂಧೂರ ಜಿ ರಾಜಶೇಖರ್ (ಶಿಗ್ಗಾಂವ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕರ್ನಾಟಕ ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲಿ, ದೊಡ್ಡ ವಾಣಿಜ್ಯ ಮಳಿಗೆಗಳಲ್ಲಿ ಹಾಗೂ ವ್ಯಾಪಾರಸ್ಥರು ಗ್ರಾಹಕರಿಗೆ ವಸ್ತುಗಳನ್ನು ಕೊಡುವಾಗ ರಸೀತಿಯನ್ನು (ಕ್ಯಾಶ್ ಬಿಲ್) ಥರ್ಮಲ್ ಪೇಪರಗಳಲ್ಲಿ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಥರ್ಮಲ್ ಪೇಪರ್‌ನಲ್ಲಿ ರಸೀತಿ ಕೊಡುವುದರಿಂದ ಅದರ ಮೇಲೆ ಮುದ್ರಣ (ಪ್ರಿಂಟ್) ಆಗಿರುವ ಅಕ್ಷರಗಳು ಸುಮಾರು 3 ರಿಂದ 4 ತಿಂಗಳುಗಳಲ್ಲಿ ಅಳಿಸಿ ಹೋಗಿ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ವ್ಯಾಪಾರಸ್ಥರು ರಸೀತಿಯನ್ನು ಕೊಡುವಾಗ ಸಣ್ಣ ಪೇಪರನಲ್ಲಿ ನೀಡುವುದರಿಂದ ಅವುಗಳನ್ನು ಕಾಯ್ದಿರಿಸಲಿಕ್ಕೆ ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯಾದ್ಯಂತ ಥರ್ಮಲ್ ಪೇಪರನಲ್ಲಿ ರಸೀತಿ ಕೊಡುವ ಬದಲಾಗಿ ಸಆದಾ ಪೇಪರಿನಲ್ಲಿ ಅಲ್ಲದೆ, ದೊಡ್ಡ ಪೇಪರಗಳಲ್ಲಿ ರಸೀತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? `

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ

ಆ) ಬಂದಿದೆ ಒಂದು ವೇಳೆ ಗ್ರಾಹಕರು ಬಯಸಿದ್ದಲ್ಲಿ ರೂಡಿಯಲ್ಲಿರುವ ಸಾಮಾನ್ಯ ಪೇಪರಿನಲ್ಲಿಯೂ ಸಹ ರಸೀತಿಗಳನ್ನು ಧರ್ಮಲ್ ಬಿಲ್ಲಿನ ಜೊತೆಯಲ್ಲಿ ನೀಡಲಾಗುತ್ತಿದೆ

ಇ) ಪೆಟ್ರೋಲ್ ಬಂಕ್‌ಗಳಲ್ಲಿ ಗ್ರಾಹಕರಿಗೆ ರಸೀತಿ (ಕ್ಯಾಶ್ ಬಿಲ್) ಗಳನ್ನು ಸಣ್ಣ ಪೇಪರಿನಲ್ಲಿ ನೀಡುತ್ತಿರುವುದರಿಂದ ಗ್ರಾಹಕರು ಅವುಗಳನ್ನು ಕಾಯ್ದಿರಿಸಲು ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಆದರೆ ಗ್ರಾಹಕರು ಬಯಸಿದ್ದಲ್ಲಿ, ರೂಡಿಯಲ್ಲಿರುವ ಸಾಮಾನ್ಯ ಪೇರಪರಿನಲ್ಲಿಯೂ ಸಹ ರಸೀತಿಗಳನ್ನು ಧರ್ಮಲ್ ಬಿಲ್ಲಿನ ಜೊತೆಯಲ್ಲಿ ನೀಡಲಾಗುತ್ತಿದೆ

ಈ) ಪೆಟ್ರೋಲ್ ಬಂಕ್‌ಗಳಿಗೆ ಸಂಬಂಧಪಟ್ಟಂತೆ, ಮೋಟಾರ್ ಸ್ಪಿರಿಟ್ ಮತ್ತು ಹೈಸ್ಪೀಡ್ ಡಿಸೇಲ್ (ರೆಗ್ಯೂಲೇಷನ್ ಆಫ್ ಸಪ್ಲೈ, ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಸ್‌ನ್ ಆಫ್ ಮಾಲ್ ಪ್ರಾಕ್ಟೀಸಸ್) ಆದೇಶ 2005ರ ಕ್ಲಾಸ್ (7)(1) ಹಾಗೂ (7)(1)(d) ಪ್ರಕಾರ ರಾಜ್ಯ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಸಿಎಸ್ 42 ಆರ್‌ಪಿಆರ್ 2006 ದಿ 1–9–2006 ರಂತೆ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ "Search and Seizure" ಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಆದರೆ, ಕರ್ನಾಟಕ ರಾಜ್ಯಾದಾದ್ಯಂತ ಧರ್ಮಲ್ ಪೇಪರ್‌ನಲ್ಲಿ ರಸೀತಿ ಕೊಡುವ ಬದಲಾಗಿ ಸಾದಾ ಪೇಪರಿನಲ್ಲಿ ಅಲ್ಲದೆ, ದೊಡ್ಡ ಪೇಪರಗಳಲ್ಲಿ ರಸೀತಿ ನೀಡುವ ಸಂಬಂಧ, ಸದರಿ ಆದೇಶದ ಕ್ಲಾಸ್ (9) ರ ಪ್ರಕಾರ ಯಾವುದೇ ಮಾರಾಟಗಾರರಿಗೆ ಆಗಿಂದ್ದಾಗ್ಗೆ ಸಾಮಾನ್ಯ ಅಥವಾ ವಿಶೇಷವಾದ ಆದೇಶಗಳನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರದ ಅವಕಾಶ ಕಲ್ಪಿಸಲಾಗಿದೆ ಇದರಂತೆ ಗ್ರಾಹಕರಿಗೆ ಅನುಕೂಲವಾಗುವಂತೆ ರಸೀತಿಗಳನ್ನು ರೂಡಿಯಲ್ಲಿರುವ ಸಾಮಾನ್ಯವಾದ ದೊಡ್ಡ ಸೈಜಿನ ಪೇಪರಿನಲ್ಲಿ ಕಡ್ಡಾಯವಾಗಿ ನೀಡುವಂತೆ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು